ಅಧ್ಯಕ್ಷರು: ನೀವು ಕೇಳುವುದಕ್ಕೆ ಬಂದಿದ್ದೀರಾ? ಎಕೆ ಬಂದಿದ್ದೀರಿ; ಇನ್ನೂ ಅವರು ಅಲ್ಲಿ ಹುಡುಕುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು: ಮಾನ್ಯ ಸುಧಾಕರಲಾಲ್‌ರವರೆ, ತಮ್ಮ ಗಮನ ಸೆಳೆಯುವ ಸೂಚನೆಗೆ ಉತ್ತರ ಬಂದಿಲ್ಲ. ಅದಕ್ಕೆ ಉತ್ತರ ಬಂದ ಮೇಲೆ ತಮಗೆ ಕಳುಹಿಸಿಕೊಡುತ್ತಾರೆ ಬಿಡಿ.

(ಗೊಂದಲ)

ಅಧ್ಯಕ್ಷರು: ಡಾ: ಸಿ. ಎನ್. ಅಶ್ವಥ್ ನಾರಾಯಣ, ಇಲ್ಲ.

(ಗೊಂದಲ)

10. ಗಮನ ಸೆಳೆಯುವ ಸೂಚನೆಗಳು

ಅಧ್ಯಕ್ಷರು: ಈಗ ಮಾನ್ಯ ಬೋಪಯ್ಯನವರ ಗಮನ ಸೆಳೆಯುವ ಸೂಚನೆ

(ಗೊಂದಲ)

1. ವಿಷಯ: ವಿರಾಜಪೇಟೆ ತಾಲ್ಲೂಕು ಬೊಮ್ಮಾಡು ಗಿರಿಜನ ಕಾಲೋನಿಯ ಮೂಲಭೂತ ಸೌಕರ್ಯ ಕಾಮಗಾರಿಗಳಿಗೆ ಅರಣ್ಯ ಇಲಾಖೆಯ ಅಧಿಕಾರಿಗಳು ಅಡ್ಡಿಪಡಿಸುತ್ತಿರುವ ಬಗ್ಗೆ.

ಅಧ್ಯಕ್ಷರು: ಮಾನ್ಯ ಬೋಪಯ್ಯನವರಿಗೆ ಉತ್ತರವನ್ನು ಕಳುಹಿಸಿಕೊಡಿ.

(ಗೊಂದಲ)

ಶ್ರೀ ಬಿ. ರಮಾನಾಥ ರೈ (ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು): ವಿರಾಜಪೇಟೆ ತಾಲ್ಲೂಕು, ನಾಲ್ಕೇರಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬೊಮ್ಮಾಡು ಗಿರಿಜನ ಕಾಲೋನಿಯಲ್ಲಿ ಪ್ರಾರಂಭಿಸಿರುವ ರಸ್ತೆ, ಸೇತುವೆ ಮತ್ತು ಆಟದ ಮೈದಾನ ನಿರ್ಮಾಣಕ್ಕಾಗಿ ಗುತ್ತಿಗೆದಾರರು ಹಾಡಿಯ ಪಕ್ಕದಲ್ಲಿರುವ ಅರಣ್ಯ ಭೂಮಿಯಲ್ಲಿ ಮಣ್ಣನ್ನು ಅಗೆದು, ಕಾಮಗಾರಿಗೆ

ಬಳಸಲು ಪ್ರಯತ್ನಿಸಿರುತ್ತಾರೆ. ಆದರೆ, ಅಪಾಯದಲ್ಲಿರುವ ವನ್ಯಜೀವಿ ಆವಾಸ ಪ್ರದೇಶಗಳ (ಹುಲಿ ಸಂರಕ್ಷಿತ ಪ್ರದೇಶ/ ರಾಷ್ಟ್ರೀಯ ಉದ್ಯಾನವನ ಮತ್ತು ಅಭಯಾರಣ್ಯಗಳ) ವ್ಯಾಪ್ತಿಯಲ್ಲಿ ವನ್ಯಜೀವಿ (ಸಂರಕ್ಷಣಾ) ಕಾಯ್ದೆ, 1972 ರ ಸೆಕ್ಷನ್ 38 (ವಿ) ರ ಪ್ರಕಾರವಾಗಿ ಯಾವುದೇ ಅರಣ್ಯೇತರ ಉದ್ದೇಶಗಳಿಗೆ ಅನುಮತಿ ನೀಡಲು ಅವಕಾಶ ಇರುವುದಿಲ್ಲವಾದ್ದರಿಂದ ಮಣ್ಣು ತೆಗೆಯದಂತೆ ಆಕ್ಷೇಪಿಸಲಾಗಿದೆ. ಆದರೆ ರಸ್ತೆ, ಸೇತುವೆ ಮತ್ತು ಆಟದ ಮೈದಾನ ನಿರ್ಮಾಣ ಕೆಲಸ–ಕಾರ್ಯಗಳಿಗೆ ಯಾವುದೇ ರೀತಿ ಅಡಚಣೆಯನ್ನು ಉಂಟು ಮಾಡಿರುವುದಿಲ್ಲ ಹಾಗೂ ನಾಗರಹೊಳೆ ವನ್ಯಜೀವಿ ವ್ಯಾಪ್ತಿಯಲ್ಲಿ ಅರಣ್ಯ ಹಕ್ಕು ಗಳನ್ನು ಮಾನ್ಯ ಮಾಡಿರುವ ಹಾಡಿಗಳಲ್ಲಿ ಮೂಲಭೂತ ಸೌರ್ಕಯಗಳನ್ನು ಅನುಷ್ಠಾನಗೊಳಿಸುವ ದೃಷ್ಟಿಯಲ್ಲಿ ಹಕ್ಕುಗಳನ್ನು ಮಾನ್ಯ ಮಾಡಿರುವ ವ್ಯಾಪ್ತಿಯ ಪ್ರದೇಶದಲ್ಲಿ ಮಾತ್ರ ಶೌಚಾಲಯ ನಿರ್ಮಾಣ ಮಾಡಲು ಅನುಸೂಚಿತ ಬುಡಕಟ್ಟುಗಳ ಮತ್ತು ಇತರ ಪಾರಂಪರಿಕ ಅರಣ್ಯ ವಾಸಿಗಳ (ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ) ಅಧಿನಿಯಮ 2006 (2007ರ 2) ಮತ್ತು ನಿಯಮಗಳು 2008 (ನಿಯಮಗಳ ತಿದ್ದುಪಡಿ 2012)ರ ಕಾಯ್ದೆಯ ಸೆಕ್ಷನ್ 3 (2) ಪ್ರಕಾರ ಅನುಮತಿ ನೀಡಲಾಗಿದೆ.

ಅಧ್ಯಕ್ಷರು: ಶ್ರೀ ಜಿ. ಹೆಚ್. ಶ್ರೀನಿವಾಸ್, ಅವರ ಗಮನ ಸೆಳೆಯುವ ಸೂಚನೆಗೆ ಉತ್ತರ ಬಂದಿದ್ದರೆ, ಅವರಿಗೆ ಅದನ್ನು ಕಳುಹಿಸಿಕೊಡಿ.

(ಗೊಂದಲ)

ಅಧ್ಯಕ್ಷರು: ಶ್ರೀ ಹೆಚ್. ಪಿ. ರಾಜೇಶ್.

(ಗೊಂದಲ)

2. **ವಿಷಯ: ದಾವಣಗೆರೆ ಜಿಲ್ಲೆ ಹರಿಹರ ತಾಲ್ಲೂಕಿನ ಹಿರೇಹಳ್ಳ ತುಂಗಭದ್ರ ನದಿಯ ಹಿನ್ನೀರಿನಿಂದ ರಸ್ತೆ ಸಂಪರ್ಕ ಕಡಿತಗೊಳ್ಳುವುದರಿಂದ ಸಾರಥಿ ಚಿಕ್ಕಬಿದರೆ ಗ್ರಾಮಗಳ ಮಧ್ಯೆ ಸೇತುವೆ ನಿರ್ಮಾಣ ಮಾಡುವ ಬಗ್ಗೆ.**

ಅಧ್ಯಕ್ಷರು: ಮಾನ್ಯ ಶಿವಶಂಕರ್‌ರವರಿಗೆ ಉತ್ತರವನ್ನು ಕಳುಹಿಸಿಕೊಡಿ.

(ಗೊಂದಲ)